ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 31 + 31 ]
Total No. of Questions : 31 + 31 ]

**ಸಂಕೇತ ಸಂಖ್ಯೆ : 98-K**

**Code No. : 98-K**

# D

**CCE PR**
**Revised & Unrevised**

**Question Paper Serial No. 81**

ಇಲ್ಲಿಂದ ಕತ್ತರಿಸಿ

# ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

## Subject : CARNATIC MUSIC / HINDUSTANI MUSIC — THEORY

**( ಕನ್ನಡ ಭಾಷಾಂತರ / Kannada Version )**

**( ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater )**

**( ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು )**

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

ದಿನಾಂಕ : 28. 09. 2020 ] [ Date : 28. 09. 2020

ಸಮಯ : ಮಧ್ಯಾಹ್ನ 2-30 ರಿಂದ ಸಂಜೆ 4-15 ರವರೆಗೆ ] [ Time : 2-30 P.M. to 4-15 P.M.

ಗರಿಷ್ಠ ಅಂಕಗಳು : 50 ] [ Max. Marks : 50

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 31 + 31 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here

# (ಕರ್ನಾಟಕ ಸಂಗೀತ)

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ರಂಜಿಸುವ ಸ್ವರ ಸಮೂಹವೇ

(A) ಲಯ (B) ತಾಳ

(C) ಯತಿ (D) ರಾಗ

2. ಸಮ್ಯಕ್ + ಗೀತ =

(A) ಸಂಗೀತ (B) ಸಣ್ಣಗೀತ

(C) ಸಾರಗೀತ (D) ಸ್ವರಗೀತ

3. ಸ್ವರದ ಮೇಲೆ ಚುಕ್ಕಿ ಇಟ್ಟು ಗುರುತಿಸಲ್ಪಡುವ ಸ್ವರಗಳು

(A) ದಾಟು ಸ್ವರಗಳು (B) ಮಂದ್ರಸ್ಥಾಯಿ ಸ್ವರಗಳು

(C) ತಾರಸ್ಥಾಯಿ ಸ್ವರಗಳು (D) ಮಧ್ಯಸ್ಥಾಯಿ ಸ್ವರಗಳು

4. ತಬಲ ವಾದ್ಯವು ಒಂದು

(A) ತತ ವಾದ್ಯ (B) ಅವನದ್ಧ ವಾದ್ಯ

(C) ಸುಷಿರ ವಾದ್ಯ (D) ಘನ ವಾದ್ಯ

5. ಕರ್ನಾಟಕ ಸಂಗೀತದ ಮೋಹನ ರಾಗದ ಹಿಂದೂಸ್ಥಾನಿ ಪದ್ಧತಿಯಲ್ಲಿನ ಹೆಸರು

(A) ಮಾಲ್‌ಕೌಂಸ್ (B) ಭೀಮ್‌ಪಲಾಸ್

(C) ಭೂಪ್ (D) ಬಿಲಾವಲ್

6. ಝಂಪೆ ತಾಳವು ರೂಪಕ ತಾಳದಿಂದ ವ್ಯತ್ಯಾಸ ಹೊಂದಲು ಕಾರಣ

(A) ಅನುದೃತ (B) ದೃತ

(C) ಲಘು (D) ಗುರು

7. ಕಾಂಭೋಜಿ ರಾಗವು ಒಂದು ಭಾಷಾಂಗ ರಾಗ ಏಕೆಂದರೆ ಈ ರಾಗದಲ್ಲಿ

(A) ಅಂಶ ಸ್ವರಗಳಿವೆ (B) ಅನ್ಯ ಸ್ವರಗಳಿವೆ

(C) ನ್ಯಾಸ ಸ್ವರಗಳಿವೆ (D) ಸಪ್ತಸ್ವರಗಳಿವೆ

8. ಸಂಗೀತ ತ್ರಿಮೂರ್ತಿಗಳ ಜೀವನ ಚರಿತ್ರೆಯಲ್ಲಿ ಕಂಡುಬರುವ ಒಂದು ಸಾಮ್ಯತೆ ಎಂದರೆ

(A) ಜನ್ಮಸ್ಥಳ (B) ಆರಾಧ್ಯ ದೈವ

(C) ಕೃತಿರಚನಾ ಶೈಲಿ (D) ಅಂಕಿತ

9. ಸಂಪೂರ್ಣ ರಾಗದಲ್ಲಿ

(A) ಐದು ಸ್ವರಗಳಿವೆ (B) ವರ್ಜ್ಯ ಸ್ವರಗಳಿವೆ

(C) ಆರು ಸ್ವರಗಳಿವೆ (D) ಸಪ್ತ ಸ್ವರಗಳಿವೆ

10. ಶಹನಾಯಿ ಒಂದು ಸುಷಿರ ವಾದ್ಯ ಏಕೆಂದರೆ ಈ ವಾದ್ಯದಲ್ಲಿ ನಾದೋತ್ಪತ್ತಿಯಾಗುವುದು

(A) ತಂತಿಯಿಂದ (B) ಗಾಳಿಯಿಂದ

(C) ಚರ್ಮದಿಂದ (D) ನೀರಿನಿಂದ

II. **ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $10 \times 1 = 10$

11. ಸಂಗೀತದ ಉಗಮವು ಯಾವ ವೇದದೊಂದಿಗೆ ಸಂಬಂಧ ಹೊಂದಿದೆ ?

12. ದಕ್ಷಿಣಾದಿ ಸಂಗೀತ ಪದ್ಧತಿಯ ಇನ್ನೊಂದು ಹೆಸರೇನು ?

13. ಔಡವ ರಾಗವೆಂದರೇನು ?

14. ಸಪ್ತತಾಳಗಳ ಹೆಸರುಗಳನ್ನು ಬರೆಯಿರಿ.

15. ಲಲಿತ ಕಲೆಗಳಲ್ಲಿ ಸಂಗೀತವು ಅಗ್ರಸ್ಥಾನದಲ್ಲಿದೆ. ಏಕೆ ?

16. ಜಂಟಿ ವರಸೆ ಮತ್ತು ಸರಳೆ ವರಸೆಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.

17. ತಾರಸ್ಥಾಯಿ ಮತ್ತು ಮಂದ್ರಸ್ಥಾಯಿಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.

18. ಕಂಚಿನ ತಾಳವನ್ನು ಘನವಾದ್ಯವೆಂದು ಏಕೆ ಕರೆಯುತ್ತಾರೆ ?

19. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳ ಅಂಕಿತವೇನು ?

20. ಕರ್ನಾಟಕ ಸಂಗೀತ ಪದ್ಧತಿ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಯಲ್ಲಿ ಕಂಡುಬರುವ ಒಂದು ಸಾಮ್ಯತೆಯನ್ನು ಬರೆಯಿರಿ.

III. **ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $9 \times 2 = 18$

21. ಸಂಗೀತಕ್ಕೆ ವೈದ್ಯಶಾಸ್ತ್ರದೊಂದಿಗೆ ಸಂಬಂಧವಿರಲು ಕಾರಣವೇನು ?

22. ಜನಕ ಹಾಗೂ ಜನ್ಯರಾಗಗಳ ಮಧ್ಯೆ ಇರುವ ವ್ಯತ್ಯಾಸವನ್ನು ತಿಳಿಸಿ.

23. ಶಾಮಾಶಾಸ್ತ್ರಿಗಳು ಕಾಮಾಕ್ಷಿದೇವಿಯ ಮೇಲೆ ಹೆಚ್ಚು ಕೃತಿಗಳನ್ನು ರಚಿಸಲು ಕಾರಣವೇನು ?

24. ತಂಬೂರಿ ಹಾಗೂ ವೀಣೆಯ ನಡುವೆ ಇರುವ ವ್ಯತ್ಯಾಸಗಳೇನು ?

25. ಸಂಗೀತಶಾಸ್ತ್ರ ಮತ್ತು ಗಣಿತಶಾಸ್ತ್ರಕ್ಕೆ ಇರುವ ಸಂಬಂಧವನ್ನು ತಿಳಿಸಿ.

26. ಕರ್ನಾಟಕ ಸಂಗೀತ ಪದ್ಧತಿಯು ಹಿಂದೂಸ್ಥಾನಿ ಸಂಗೀತ ಪದ್ಧತಿಗಿಂತ ಹೇಗೆ ಭಿನ್ನವಾಗಿದೆ ? ತಿಳಿಸಿ.

27. ಈ ಕೆಳಗಿನ ಗೀತೆಗಳನ್ನು ಪಿಳ್ಳಾರಿ ಹಾಗೂ ಸಂಚಾರಿಗೀತೆಗಳನ್ನಾಗಿ ವಿಂಗಡಿಸಿ ಬರೆಯಿರಿ :

    (i) ಕೆರೆಯ ನೀರನು (ii) ಕುಂದ ಗೌರ

    (iii) ಮಂದರೋದ್ಧಾರೆ (iv) ಕಮಲಜಾದಳ

28. ಪ್ರಕೃತಿ ಹಾಗೂ ವಿಕೃತಿ ಸ್ವರಗಳ ನಡುವೆ ಇರುವ ವ್ಯತ್ಯಾಸವೇನು ?

29. ಈ ಕೆಳಗಿನ ರಾಗಗಳನ್ನು ಜನಕ, ಜನ್ಯ ರಾಗಗಳನ್ನಾಗಿ ವಿಂಗಡಿಸಿ :

    ಮೋಹನ, ಧೀರ ಶಂಕರಾಭರಣ, ಹಂಸಧ್ವನಿ, ಮೇಚ ಕಲ್ಯಾಣಿ

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

30. ತ್ರಿಶ್ರಜಾತಿ ತ್ರಿಪುಟ ತಾಳದ ಅಲಂಕಾರವನ್ನು ತಾಳಲಿಪಿ ಮತ್ತು ಸ್ವರಲಿಪಿಯೊಂದಿಗೆ ವಿನ್ಯಾಸಗೊಳಿಸಿ ಬರೆಯಿರಿ. 5

31. ತ್ಯಾಗರಾಜರ ಜೀವನಚರಿತ್ರೆಯನ್ನು ಬರೆಯಿರಿ. 7

## (ಹಿಂದೂಸ್ಥಾನಿ ಸಂಗೀತ)

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಭೂಪ್ ರಾಗವನ್ನು ಔಡವ–ಔಡವ ರಾಗ ಎಂದು ಕರೆಯುತ್ತಾರೆ ಏಕೆಂದರೆ ಈ ರಾಗದ ಆರೋಹಣ–ಅವರೋಹಣದಲ್ಲಿ

   (A) ಆರು–ಏಳು ಸ್ವರಗಳಿವೆ  (B) ಐದು–ಐದು ಸ್ವರಗಳಿವೆ

   (C) ಐದು–ಏಳು ಸ್ವರಗಳಿವೆ  (D) ಐದು–ಆರು ಸ್ವರಗಳಿವೆ

2. ಬಿಬಾಸ್ ರಾಗವನ್ನು ಉತ್ತರಾಂಗ ಪ್ರಧಾನರಾಗ ಎಂದು ಕರೆಯುತ್ತಾರೆ ಏಕೆಂದರೆ

   (A) ಈ ರಾಗದ ವಾದಿಸ್ವರವು ಕೋಮಲ ಧೈವತವಾಗಿದೆ

   (B) ಈ ರಾಗದ ಸಂವಾದಿಸ್ವರವು ಶುದ್ಧ ಗಾಂಧಾರವಾಗಿದೆ

   (C) ಈ ರಾಗದ ರಸ ಭಕ್ತಿರಸವಾಗಿದೆ

   (D) ಈ ರಾಗವು ಔಡವ–ಔಡವ ರಾಗವಾಗಿದೆ

3. ಸಂಗೀತ ವಾದ್ಯಗಳಿಂದ ಹೊರಹೊಮ್ಮುವ ನಾದ

   (A) ಆಹತ ನಾದ  (B) ಅನಾಹತ ನಾದ

   (C) ಶೃತಿ  (D) ಸುನಾದ

4. 'ಉತ್ತರಾದಿ' ಎಂದು ಕರೆಯಲ್ಪಡುವ ಸಂಗೀತ

   (A) ಕರ್ನಾಟಕ ಸಂಗೀತ  (B) ಸುಗಮ ಸಂಗೀತ

   (C) ಹಿಂದೂಸ್ಥಾನಿ ಸಂಗೀತ  (D) ಜನಪದ ಸಂಗೀತ

5. 'ವಂದೇ ಮಾತರಂ' ಗೀತೆಯನ್ನು ರಚಿಸಿದ ಕವಿ

   (A) ಕುವೆಂಪು  (B) ದ.ರಾ. ಬೇಂದ್ರೆ

   (C) ಬಂಕಿಮಚಂದ್ರ ಚಟರ್ಜಿ  (D) ಶ್ಯಾಮಲಾಲ್ ಗುಪ್ತ

6. ಸಂಗೀತದ ಸ್ವರಲಿಪಿಯಲ್ಲಿ ಸ್ವರದ ಕೆಳಗ ಅಡ್ಡಗೆರೆ ಕೊಡುವ ಕಾರಣ

   (A) ಕೋಮಲ ಸ್ವರಗಳನ್ನು ಗುರುತಿಸಲು  (B) ಶುದ್ಧ ಸ್ವರಗಳನ್ನು ಗುರುತಿಸಲು

   (C) ತೀವ್ರ ಸ್ವರಗಳನ್ನು ಗುರುತಿಸಲು  (D) ಪ್ರಕೃತಿ ಸ್ವರಗಳನ್ನು ಗುರುತಿಸಲು

7. ಪುರಂದರದಾಸರ ಅಂಕಿತನಾಮ

(A) ವಿಜಯವಿಠಲ (B) ಕಮಲೇಶ ವಿಠಲ

(C) ಪುರಂದರವಿಠಲ (D) ಗೋಪಾಲ ವಿಠಲ

8. ಸಿತಾರ್ ವಾದ್ಯವನ್ನು ತತ್ ವಾದ್ಯ ಎಂದು ಕರೆಯಲು ಕಾರಣ ಈ ವಾದ್ಯದಲ್ಲಿ ನಾದೋತ್ಪತ್ತಿಯಾಗುವುದು

(A) ಗಾಳಿಯಿಂದ (B) ನೀರಿನಿಂದ

(C) ತಂತಿಯಿಂದ (D) ಚರ್ಮದಿಂದ

9. ಹಿಂದೂಸ್ಥಾನಿ ಸಂಗೀತದಲ್ಲಿರುವ ಒಟ್ಟು ಥಾಟ್‌ಗಳ ಸಂಖ್ಯೆ

(A) ಹತ್ತು (B) ಹದಿನಾರು

(C) ಎಪ್ಪತ್ತೆರಡು (D) ಹನ್ನೆರಡು

10. ದುರ್ಗಾ ರಾಗದಲ್ಲಿ ಮಧ್ಯಮ ಸ್ವರದ ಬದಲಾಗಿ 'ಶುದ್ಧ ಗಾಂಧಾರ' ಸ್ವರವನ್ನು ಬಳಸಿದರೆ ಆಗುವ ರಾಗ

(A) ಭೂಪ್ (B) ಬಿಬಾಸ್

(C) ತಿಲಂಗ್ (D) ಮಾಲ್‌ಕೌಂಸ್

II. **ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $10 \times 1 = 10$

11. ದೃತ್ ಏಕತಾಳಕ್ಕೂ ಮತ್ತು ಚೌತಾಳಕ್ಕೂ ಇರುವ ಒಂದು ವ್ಯತ್ಯಾಸವನ್ನು ತಿಳಿಸಿ.

12. ಮುಖ್ಯಾಂಗ ಎಂದರೇನು ?

13. ಜೀವನ್‌ಪುರಿ ರಾಗವನ್ನು ಷಾಡವ–ಸಂಪೂರ್ಣರಾಗ ಎಂದು ಕರೆಯುವರು ಏಕೆ ?

14. ಪುರಂದರದಾಸರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆಯಲು ಕಾರಣವೇನು ?

15. ಮಲ್ಲಿಕಾರ್ಜುನ ಮನಸೂರರು ಎಲ್ಲಿ ಜನಿಸಿದರು ?

16. ಸಂಗೀತದ ಕಲಿಕಾರ್ಥಿಗಳು ಸ್ವರಾಭ್ಯಾಸವನ್ನು ಮಾಡಬೇಕು. ಏಕೆ ?

17. ರೂಪಕ ತಾಳದಲ್ಲಿ ಎಷ್ಟು ಮಾತ್ರೆಗಳಿವೆ ?

18. ಅವರೋಹಣ ಎಂದರೇನು ?

19. ಸ್ವರಲಿಪಿಯಲ್ಲಿ ಸ್ವರದ ಕೆಳಗೆ ಅರ್ಧಚಂದ್ರಾಕೃತಿಯ ($\smile$) ಚಿಹ್ನೆ ಕೊಡುವರು. ಏಕೆ ?

20. ತಾಳಲಿಪಿಯಲ್ಲಿ 'X' ಚಿಹ್ನೆಯನ್ನು ಬಳಸುತ್ತಾರೆ. ಏಕೆ ?

III. **ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $9 \times 2 = 18$

21. ಶ್ರವಣಜ್ಞಾನದ ಮಹತ್ವವನ್ನು ವಿವರಿಸಿ.

22. ತಂಬೂರಿ ಮತ್ತು ಸಿತಾರ್ ವಾದ್ಯಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ.

23. ಪುರಂದರದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜವನ್ನು ತಿಳಿಗೊಳಿಸಿದರು. ಹೇಗೆ ?

24. ಈ ಕೆಳಗಿನ ರಾಗಗಳಲ್ಲಿ ಕರ್ನಾಟಕ ಸಂಗೀತ ಹಾಗೂ ಹಿಂದೂಸ್ಥಾನಿ ಸಂಗೀತಕ್ಕೆ ಸಂಬಂಧಿಸಿದ ರಾಗಗಳನ್ನು ವರ್ಗೀಕರಿಸಿ ಬರೆಯಿರಿ :

    ಮೋಹನ, ತಿಲಂಗ್, ಪಟದೀಪ್, ಹಿಂದೋಳ.

25. ಕರ್ನಾಟಕ ಸಂಗೀತ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ.

26. ದೇಸ್ ರಾಗವನ್ನು ಔಡವ–ಸಂಪೂರ್ಣರಾಗ ಎಂದು ಕರೆಯುತ್ತಾರೆ. ಏಕೆ ?

27. ಕರ್ನಾಟಕದಲ್ಲಿ ಹಿಂದೂಸ್ಥಾನಿ ಸಂಗೀತ ಬೆಳೆದು ಬರಲು ಕಾರಣವೇನು ?

28. ಭೈರವ್ ರಾಗವು ಬಿಬಾಸ್ ರಾಗಕ್ಕಿಂತ ಭಿನ್ನವಾಗಿದೆ. ಹೇಗೆ ?

29. ಸಂಗೀತಗಾರರಿಗೆ ಗಾಯನ ಸಮಯದ ಅರಿವಿರಬೇಕು. ಏಕೆ ?

IV. **ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

30. ನಿಮ್ಮ ಪಠ್ಯಕ್ರಮದಲ್ಲಿರುವ ಸ್ವರಗೀತೆಯನ್ನು ಸ್ವರಪ್ರಸ್ತಾರದೊಂದಿಗೆ ಲಿಪಿಬದ್ಧಗೊಳಿಸಿ. 5

31. ಧ್ರುಪದ್ ಗಾಯನಕ್ಕಿಂತ ಛೋಟಾಖ್ಯಾಲ್ ಗಾಯನವು ಭಿನ್ನವಾಗಿದೆ ಹೇಗೆ ? ವಿವರಿಸಿ. 7